**ಸಿ.ಸಿ.ನಂ.2171/2021**
**ಸಿಡಬ್ಲ್ಯು: 07 ಪಿಡಬ್ಲ್ಯು: 03**

**ಮೆಃ ಹೆಚ್ಚುವರಿ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಶ್ವನಾಥ ಉಮದಿ |
| ತಂದೆ/ಗಂಡ ಹೆಸರು | : | ಮಹಾತೇಂಶ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಅಂಬುಲೇನ್ಸನಲ್ಲಿ ಸ್ಟ್ಯಾಪನರ್ಸ ಮನಗೂಳಿ ಸರಕಾರಿ ಆಸ್ಪತ್ರೆ |
| ವಾಸಸ್ಥಳ | : | ವಿಜಯಪುರ |

<u>ಸಾಕ್ಷಿಯನ್ನು ಇಂದು ದಿನಾಂಕಃ 26-09-2025. ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>
<u>ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ</u>

1) ಮನಗೂಳಿ ಸರಕಾರಿ ಆಸ್ಪತ್ರೆಯ ಅಂಬುಲೇನ್ಸನಲ್ಲಿ ಸ್ಟ್ಯಾಪನರ್ಸ ಅಂತಾ ಸುಮಾರು 7 ವರ್ಷಗಳಿಂದ ಕರ್ತವ್ಯನಿರ್ವಹಿಸುತ್ತಿದ್ದೇನೆ.

2) ದಿ;31-03-2021 ರಂದು ನನಗೆ ಬೆಂಗಳೂರ ಕಾಲ ಸೆಂಟರ ನನಗೆ ಕರೆ ಬೆಳಿಗ್ಗೆ 9.30 ಗಂಟೆ ಬಂದಿದ್ದು. ಒಂದು 1 ನಿಮಿಷದಲ್ಲಿ ನಾನು ಆಸ್ಪತ್ರೆಯನ್ನು ಬಿಟ್ಟು ಹೋಗುವಾಗ ಎನ್ ಎಚ್-52 ರಸ್ತೆ ನಿಸಾರ ಪೆಟ್ರೋಲ ಪಂಪ ಹತ್ತಿರ ಅಪಘಾತ ಆಗಿರುತ್ತದೆ ಅಂತಾ ಫೋನ ಕರೆ ಬಂದಿದ್ದು. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಒಂದು ಕಾರಿಗೆ ಅಪಘಾತವಾಗಿತ್ತು. ಸದರಿ ಕಾರು ಲಾರಿಯ ಹಿಂಬದಲ್ಲಿಯಲ್ಲಿ ಸಿಲುಕಿಕೊಂಡಿತ್ತು ಮತ್ತು ಜನ ಸಹ ಸೇರಿದ್ದು. ಸದರಿ ಜನರ ಸಹಾಯದಿಂದ ಸದರಿ ಕಾರನ್ನು ಹೊರಗೆ ತೆಗೆದು ಅದರಲ್ಲಿ ಇದ್ದ ಗಾಯಳನ್ನು ಹೊರಗೆ ತೆಗೆದು ಪ್ರಥಮ ಚಿಕಿತ್ಸೆ ಕೊಟ್ಟು ಅಂಬುಲೇನ್ಸನಲ್ಲಿ ತೆಗೆದುಕೊಂಡು ವಿಜಯಪುರ ಜಿಲ್ಲಾ ಆಸ್ಪತ್ರೆಗೆ ಹೊರಟಿದ್ದೇವು ವಿಜಯಪುರ ಹತ್ತಿರ ಹೋದಾಗ ಗಾಯಳುವಿನ ಮೊಬೈಲಗೆ ಒಂದು ಫೋನ ಕರೆ ಬಂದಿದ್ದು ಸದರಿ ಫೋನನ್ನು ನಾನು ಓಪನ ಮಾಡಲು ಹೋದಾಗ ಅದು ಲಾಕ ಇದ್ದು ಅದು ಓಪನ ಆಗಿರುವುದಿಲ್ಲ. ವಿಜಯಪುರದ ಸಮೀಪ ಹೋದಾಗ ಸದರಿ ಮೊಬೈಲಗೆ ಒಂದು ಫೋನ ಕರೆ ಬಂದಿದ್ದು ಅದರಲ್ಲಿ ಒಬ್ಬ ಮಹಿಳೆ ಮಾತನಾಡುತ್ತಿದ್ದು ಅವರಿಗೆ ಅಪಗಾತದ ಕುರಿತು ಮತ್ತು ಗಾಯಳ ಬಳಿ ಸಿಕ್ಕ ಆಧಾರ ಕಾರ್ಡ ಆದಾರ ಮೇರೆಗೆ ಗಾಯಳುವಿನ ಗುರುತು ಪರಿಚಯ ಹೇಳಿ ಅವರು ಒಳ್ಳೆ ಆಸ್ಪತ್ರೆಗೆ ಸೇರಿಸುವಂತೆ ನನಗೆ ಸೂಚಿಸಿದ್ದು ನಾನು ಹತ್ತಿರ ಇರುವ ವೇದಾಂತ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಕೆ ಮಾಡಿ ವೈದ್ಯರಿಗೆ ಮತ್ತು ಸದರಿ ಮಹಿಳೆಗೆ ಮಾತನಾಡುವಂತೆ ಸದರಿ ಮೊಬೈಲ ಮತ್ತು

ಆಧಾರಕಾರ್ಡನ್ನು ವೈದ್ಯರಿಗೆ ನೀಡಿದ್ದೆ. ಸದರಿ ಅಪಘಾತ ನಿಂತ ಲಾರಿಗೆ ಕಾರು ಹಿಂದಿನಿಂದ ಹೋಗಿ ಡಿಕ್ಕಿ ಪಡಿಸಿ ಆಗಿತ್ತು. ಪೋಲಿಸರಿಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಎಪಿಪಿ ರವರರಿಂದ**

3) ಲಾರಿ ನೊಂದಣಿ ಸಂ.MH-13/CU-3022 ಅಂತಾ ಇತ್ತು ಎಂದರೆ ಸರಿ. ಸದರಿ ಕಾರ ನೊಂದಣಿ ಸಂ.KA-35/B-8766 ಅಂತಾ ಇತ್ತು ಎಂದರೆ ಸರಿ. ಆ ದಿನ 2 ನೇ ಆರೋಪಿ ಲಾರಿ ಚಾಲಕ ತನ್ನ ಲಾರಿಯಲ್ಲಿ ಈರುಳ್ಳಿಯನ್ನು ಲೋಡ ಮಾಡಿಕೊಂಡು ಯಾವುದೇ ಇಂಡಿಕೇಟರ ಹಾಕದೆ ರಸ್ತೆಯಲ್ಲಿ ನಿಲ್ಲಿಸಿದ್ದು ಅದಕ್ಕೆ 1 ನೇ ಆರೋಪಿ ತಾನು ಚಲಾಯಹಿಸುತ್ತಿದ್ದು ಅತೀ ವೇಗ ಮತ್ತು ಅಲಕ್ಷತನದಿಂದಿ ಚಲಾಯಿಸಿಕೊಂಡು ಹೋಗಿ ಹಿಂದಿನಿಂದ ಸದರಿ ಲಾರಿಗೆ ಡಿಕ್ಕಿಪಡಿಸಿ ಅಪಘಾತ ಪಡಿಸಿದ ಕುರಿತು ಕೇಳಿ ಗೊತ್ತಾಯಿತು ಎಂದರೆ ಸರಿ. ದಿ:01-04-2021 ರಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿ:31-03-2021 ರಂದು ಚಾಸಾ-1 ರವರು ದೂರನ್ನು ದಾಖಲಿಸಿದ್ದರು ಎಂದರೆ ಸರಿ. 1 ನೇ ಆರೋಪಿ ಉಪಚಾರ ಪಲಿಸದೆ ಬೆಳಗಾವಿ ಕೆ.ಎಲ.ಈ. ಆಸ್ಪತ್ರೆಯಲ್ಲಿ ತೀರಿಕೊಂಡಿದ್ದರು ಅಂತಾ ನನಗೆ ತಿಳಿದು ಬಂತು ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

4) ಪೋಲಿಸರು ನನ್ನ ಐ.ಡಿಯನ್ನು ಪಡೆದುಕೊಂಡಿರುವುದಿಲ್ಲ. ಪೋಲಿಸರು ನನಗೆ ಯಾವಾಗ ಪೋನ ಕರೆ ಮಾಡಿ ವಿಚಾರ ಮಾಡಿದ್ದರು ಅಂತಾ ದಿನಾಂಕ ಮತ್ತು ಸಮಯ ಹೇಳಲು ಆಗುವುದಿಲ್ಲ. ನನ್ನ ಮೊಬೈಲಗೆ ಕರೆ ಬಂದ ಮೊಬೈಲ ನಂಬರ ಹೇಳಲು ಆಗುವುದಿಲ್ಲ. ಕಾರ ನಂ.KA-35/B-8766 ನೇದ್ದರಿಂದ ಲಾರಿಗೆ ಹಿಂದಿನಿಂದ ಡಿಕ್ಕಿ ಪಡಿಸಿ ಅಪಘಾತವಾಗಿತ್ತು ಅಂತಾ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಗಾಯಳುವಿನಿಂದ ಪಡೆದುಕೊಂಡ ಮೊಬೈಲ ಮತ್ತು ಆಧಾರ ಕಾರ್ಡನನ್ನು ವೈದ್ಯರಿಗೆ ನೀಡಿರುತ್ತೇನೆ. ಅಪಘಾತವಾಗುವುದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತ ಹೇಗೆ ಆಯಿತು ಅಂತಾ ನನಗೆ ತಿಳಿಸಿದ ವ್ಯಕ್ತಿ ಹೆಸರು ಹೇಳಲು ಆಗುವುದಿಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಹಾಗಾಗಿ 2 ನೇ ಆರೋಪಿಹಿಂದಿನಿಂದ ತನ್ನ ಕಾರನ್ನು

ಚಲಾಯಿಸಿಕೊಂಡು ಅಪಘಾತ ಪಡಿಸಿದ್ದಾ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.